**ಸಾಕ್ಷಿಗೆ ದಿನಾಂಕಃ19-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**::ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.TNR ವಕೀಲರಿಂದ ::**

ನನ್ನ ಅಜ್ಜ ವೆಂಕಟಪ್ಪ ರವರಿಗೆ 5 ಜನ ಮಕ್ಕಳಿದ್ದು ಅವರ ಹೆಸರುಗಳು ತಿಮ್ಮಯ್ಯ ರಾಮಣ್ಣ ರೇವಣ್ಣ ಹುನುಮಯ್ಯ ಮತ್ತು ಧನಂಜಯ ಆಗಿರುತ್ತಾರೆ. ಸದರಿಯವರ ಪೈಕಿ ಕೇವಲ ಧನಂಜಯ ರವರು ಜೀವಂತವಾಗಿದ್ದು ಅವರು ತರೀಕೆರೆಯಲ್ಲಿ ವಾಸವಾಗಿರುತ್ತಾರೆ. ಸದರಿಯವರನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಲು ಯಾವುದಾದರು ತೊಂದರೆ ಇರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರಿಗೆ ವಯಸ್ಸಾಗಿರುತ್ತದೆ ಎಂದು ನುಡಿಯುತ್ತಾರೆ. ಧನಂಜಯ ರವರಿಗೆ ಸಂತೋಷ ಎನ್ನುವ ಮಗ ಇದ್ದು ಅವರನ್ನು ಈ ದಾವೆಯಲ್ಲಿ ಸಾಕ್ಷಿ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಮೃತ ಸಹೋದರಿಯರಿಗೆ ಯಾವುದೇ ವಾರಸುದಾರರು ಇರುವುದಿಲ್ಲ. ನನ್ನ ತಾಯಿಯ ಹೆಸರು ಪುಟ್ಟಮ್ಮ ಆಗಿರುತ್ತದೆ. ಸದರಿಯವರಿಗೆ ಒಬ್ಬರು ಸಹೋದರಿ ಇದ್ದು ಪಾರ್ತಮ್ಮ ಆಗಿದ್ದು ಅವರು ಸಹ ಮೃತರಾಗಿರುತ್ತಾರೆ. ಅವರಿಗೂ ಸಹ ಯಾವುದೇ ವಾರಸುದಾರರು ಇರುವುದಿಲ್ಲ. ನನ್ನ ತಾಯಿ 1990 ರಲ್ಲಿ ಮೃತರಾಗಿರಬಹುದು ನಿಖರವಾದ ದಿನಾಂಕ ನೆನಪಿಲ್ಲ. ನನ್ನ ತಂದೆ 2000 ರಲ್ಲಿ ಮೃತರಾಗಿರುತ್ತಾರೆ. ನಿಖರವಾದ ದಿನಾಂಕ ನೆನಪಿಲ್ಲ. ನನ್ನ ತಂದೆ ತಾಯಿಯ ಮರಣ ಪ್ರಮಾಣಪತ್ರವನ್ನು ಇವರೆಗೂ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ1 ರಿಂದ 7 ದಾಖಲಾತಿಗಳಲ್ಲಿ ಟಿ ವಿ ರಾಮಯ್ಯ ಎಂಬ ಹೆಸರು ಇದ್ದು ನಿಪಿ8 ರಿಂದ 21 ವರೆಗೂ ಟಿ ರಾಮಯ್ಯ ಎನ್ನುವವರ ಹೆಸರು ಇರುತ್ತದೆ ಎಂದರೆ ಇರಬಹುದು. ನಾನು ಹಾಜರುಪಡಿಸಿರುವ ನಿಪಿ1 ರಿಂದ 21 ರಲ್ಲಿ ಟಿ ರಾಮಪ್ಪ ಎನ್ನುವ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ಬದಲಾವಣೆ ಮಾಡಿಕೊಳ್ಳುವ ಸಮಯದಲ್ಲಿ ನಾನು ತಹಶೀಲ್ದಾರ್ ರವರಿಗೆ ವಂಶವೃಕ್ಷವನ್ನು ನೀಡಿರುತ್ತೇನೆ. ಸದರಿ ವಂಶವೃಕ್ಷವನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಸಮಯದಲ್ಲಿ ನನ್ನ ತಂದೆ ತಾಯಿಯ ಮರಣ ಪ್ರಮಣಪತ್ರವನ್ನು ಸಹ ತಹಶೀಲ್ದಾರ್ ರವರಿಗೆ ನೀಡಿರುತ್ತೇನೆ.

ನಾನು ಮತ್ತು ಇತರೇ ವಾದಿಗಳು ನಮ್ಮ ಆಧಾರ್ ಕಾರ್ಡ್ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದನ್ನು ಹಾಜರುಪಡಿಸದಿದ್ದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಟಿ ವಿ ರಾಮಯ್ಯ ಹಾಗೂ ಟಿ ರಾಮಪ್ಪ ಒಂದೇ ವ್ಯಕ್ತಿ ಎಂದು ತೋರಿಸಲು ನನ್ನ ಬಳಿ ದಾಖಲಾತಿಗಳು ಇರುತ್ತವೆ. ವಾದಿಗಳಾದ ನಾವುಗಳು ಟಿ ವಿ ರಾಮಯ್ಯ ರವರ ಮಕ್ಕಳು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತುದಿಪೇಟೆ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಯಾವ ಸಾಲಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಉಳಿದ ವಾದಿಗಳು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಉಳಿದ ವಾದಿಗಳಿಗೆ ಸಹಿ ಮಾಡಲು ಬರುವುದಿಲ್ಲ ಎಂದು ಸಾಕ್ಷಿ ಮೊದಲಿಗೆ ಉತ್ತರಿಸಿ ವಾದ ಪತ್ರ ತೋರಿಸಿದ ನಂತರ ಸಹಿ ಹಾಕುವುದನ್ನು ಈಗ ಕಲಿತಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ನಾವು ಬೋರ್ ಹಾಕಿಸಿರುತ್ತೇವೆ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ವಿದ್ಯುತ್ ಸಂಪರ್ಕ ಪಡೆದಿದ್ದು ಅದು ವಾದಿಗಳಾದ ನಮ್ಮ ಹೆಸರಿನಲ್ಲಿ ಇರುತ್ತದೆ. ಸದರಿ ವಿದ್ಯುತ್ ಸಂಪರ್ಕಕ್ಕೆ ಸಂಬಂಧಪಟ್ಟಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಎಷ್ಟು ಅಡಿಕೆ ಸಸಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಆದರೆ ಯಾವುದೇ ತೆಂಗಿನ ಸಸಿಗಳು ಇರುವುದಿಲ್ಲ. ನನ್ನ ವಾದ ಪತ್ರದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ತೆಂಗು ಇರುವ ಬಗ್ಗೆ ನಮೂದು ಇರುತ್ತದೆ ಎಂದರೆ ಇರಬಹುದು. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇರುವುದಿಲ್ಲ ಮತ್ತು ಯಾವುದೇ ಬೆಳೆ ಬೆಳೆದಿರುವುದಿಲ್ಲ ಎಂದರೆ ಸರಿಯಲ್ಲ. ಟಿ ವಿ ರಾಮಯ್ಯ ರವರ ಕಾಲದಿಂದ ಪ್ರತಿವಾದಿಗಳೇ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಸರ್ವೇ ನಂಬರ್ 11/5 ಆಗಿದ್ದು ಅದರ ವಿಸ್ತೀರ್ಣ 2 ಎಕರೆ ಆಗಿದ್ದು ಅದರ ಚೆಕ್ಕುಬಂದಿ ನನಗೆ ತಿಳಿದಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿನ ದಕ್ಷಿಣಕ್ಕೆ 2 ಪ್ರತಿವಾದಿ ಜಮೀನು ಇರುತ್ತದೆ. ಪೂರ್ವಕ್ಕೆ ರುದ್ರಪ್ಪ ರವರ ಜಮೀನು, ಉತ್ತರಕ್ಕೆ ಚಂದ್ರಮೌಳಿ ರವರ ಜಮೀನು ಮತ್ತು ಪಶ್ಚಿಮಕ್ಕೆ ಹಳ್ಳ ಬರುತ್ತದೆ. ಸಾಕ್ಷಿಯು ಮುಂದುವರೆದು ದಾವಾ ಶೆಡ್ಯೂಲ್ ಸ್ವತ್ತಿನ ಉತ್ತರಕ್ಕೆ 2 ನೇ ಪ್ರತಿವಾದಿ ಕಮಲಮ್ಮ ಇರುತ್ತಾರೆ ಎಂದು ನುಡಿಯುತ್ತಾರೆ. ಟಿ ವಿ ರಾಮಯ್ಯ ರವರಿಗೆ ಮತ್ತು ನಮಗೆ ಯಾವುದೇ

ಸಂಬಂಧ ಇಲ್ಲದಿದ್ದರೂ ಸುಳ್ಳು ದಾಖಲೆ ಆಧಾರದಲ್ಲಿ ಸುಳ್ಳು ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಸ್ವಾಧೀನಕ್ಕೆ ಪ್ರತಿವಾದಿ ತೊಂದರೆ ನೀಡಿದ ಕಾರಣ ಈ ದಾವೆಯನ್ನು ಹೂಡಿರುತ್ತೇವೆ. ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: